



# ಉಳಿವಿಗಾಗಿ ಊರು

'ಮತ್ತೆ ಬೆಂಗಳೂರಿನತ್ತ ಮುಖ ಹಾಕೋದಿಲ್ಲ. ಊರಲ್ಲಿ ಐದೆಕ್ರೆ ಕಾಫಿ ತೋಟವುಂಟು. ಅನ್ನವೋ ಗಂಜಿಯೋ ಕುಡಿಯುತ್ತ ಅಲ್ಲೇ ಇರ್ತೇವೆ. ನಗರದ ಸಹವಾಸ ಸಾಕೇ ಸಾಕು'. ಟೋಲ್‌ಗೇಟ್‌ನಲ್ಲಿ ಕಾರು ನಿಲ್ಲಿಸಿದ ಗಳಿಗೆಯಲ್ಲಿ ಮೈಕ್ ಹಿಡಿದ ಸುದ್ದಿವಾಹಿನಿಯ ವರದಿಗಾರರಿಗೆ ಊರಿಗೆ ಹೊರಟವರೊಬ್ಬರು ಉತ್ತರ ಕೊಡುತ್ತಿದ್ದರು. ಮಕ್ಕಳು ಮರಿಗಳು, ಪಾತ್ರೆ ಸರಂಜಾಮುಗಳನ್ನು ವಾಹನದಲ್ಲಿ ಭರ್ತಿಮಾಡಿಕೊಂಡು ಹೆದ್ದಾರಿ ಹಿಡಿದ ಉತ್ತರ ಕರ್ನಾಟಕ, ಹೈದ್ರಾಬಾದ್ ಕರ್ನಾಟಕ ಮಂದಿಯಂತೂ ಬೆಚ್ಚಿಬಿದ್ದವರಂತೆ ಕಾಣುತ್ತಿದ್ದರು. ರಾಜ್ಯಕ್ಕೆಲ್ಲ ರುಚಿ ರುಚಿಯ ಬಿಳಿಜೋಳದ ರೊಟ್ಟಿ ಪರಿಚಯಿಸಿದ ಕೃಷಿ ನೆಲೆಯ ಇವರು, ಊಟದ ಮಾತಿರಲಿ, ಕುಡಿಯಲು ನೀರು ಪಡೆಯಲೂ ಮಹಾನಗರದಲ್ಲಿ ಕಷ್ಟಪಡಬೇಕಾಯ್ತು. ನಗರದಲ್ಲಿ ಇರುವವರನ್ನು 'ಯಾವತ್ತು ಊರಿಗೆ ಬರೋದು?' ಎಂದು ಫೋನು ಮಾಡಿದಾಗೆಲ್ಲ ಪ್ರಶ್ನಿಸುತ್ತಿದ್ದ ಅಮ್ಮ, ಅತ್ತೆ, ಸಂಬಂಧಿಕರೆಲ್ಲ ಈಗ ಸ್ವಲ್ಪ ಸುಮ್ಮನಾಗಿದ್ದಾರೆ. ಮಾಸ್ಕ್ ಹಾಕಿ ದೂರವಾಣಿಯಲ್ಲಿ ಮಾತಾಡಿದವರ ಧ್ವನಿ ಬೇರೆಯೇ ಕೇಳುತ್ತಿದೆ.

ಬೆಂಗಳೂರು ಬಿಟ್ಟು ಕಿತ್ತೆದ್ದು ಜನ ಹೊರಟಿದ್ದನ್ನು ಹಲವು ದಿನಗಳಿಂದ ನೋಡುತ್ತಿದ್ದೇವೆ. ಎಲ್ಲ ಮಹಾನಗರಗಳ ಕಥೆಯೂ ಒಂದೇ! ಜನದಟ್ಟಣೆ, ವಾಹನದಟ್ಟಣೆ, ಹೊಗೆ ಕವಿದ ನಗರ ಪರಿಸರ ಬದಲಾಗಿ ದಾರಿಗಳು ಬಿಕೋ ಎನ್ನುತ್ತಿವೆ. ಅಸಂಖ್ಯಾತ ಜನರ ಆರ್ಥಿಕ ಬದುಕು ಕಣ್ಣಿಗೆ ಕಾಣದ ಕೊರೊನಾ ವೈರಸ್ ಕಾರಣಕ್ಕೆ ಊಹೆಗೂ ನಿಲುಕದಷ್ಟು ತಿರುವುಮುರುವಾಗಿದೆ. ರೋಗಕ್ಕೆ ಮದ್ದೇನೆಂದು ಜಗತ್ತು ಹುಡುಕುತ್ತಿದೆ. ದುಡಿಮೆಯ ದಾರಿಗಳು ಮುಚ್ಚಿ ಮನೆ ಮನೆಯಲ್ಲಿ ದುಃಖ ದೊಡ್ಡದಾಗುತ್ತಿದೆ. 20 ವರ್ಷಗಳಿಂದ ಕೆಲಸಕೊಟ್ಟ ಕಂಪನಿ ಬಾಗಿಲು ಹಾಕಿದರೆ ತಂದೆ ತಾಯಿ, ಹೆಂಡತಿ ಮಕ್ಕಳ ಪರಿಸ್ಥಿತಿ ಏನಾದೀತು? ಉದ್ಯಮ ಶುರು ಮಾಡಿದವರು, ಮಕ್ಕಳ ಶಿಕ್ಷಣದ ಬಗ್ಗೆ ನಿರ್ಧರಿಸಿದವರು, ಮನೆ ಕಟ್ಟಿದವರು, ವಾಹನ ಖರೀದಿಸಿದವರಿಗೆ ಸಾಲದ ಕಂತು ತೀರಿಸುವುದು ಹೇಗೆಂದು ತಿಳಿಯುತ್ತಿಲ್ಲ.

ನಗರದ ಚಾಕರಿ ಆರಾಮವೇನಲ್ಲ. ಎಲ್ಲರೂ ಲಕ್ಷ ಸಂಪಾದನೆಯ ಐಟಿ ಕುಲದವರಲ್ಲ. ಬೆಳಿಗ್ಗೆ ಎಂಟಕ್ಕೆ ಮನೆ ಬಿಟ್ಟು ಸಂಚಾರ ದಟ್ಟಣೆಯಲ್ಲಿ ಉಸಿರುಕಟ್ಟಿಕೊಂಡು ಕೆಲಸದ ಜಾಗ ಸೇರಿ ರಾತ್ರಿ ಮರಳುತ್ತಿದ್ದ ದಿನಚರಿಯಲ್ಲಿ ಇಡೀ ಕುಟುಂಬದ ಅನ್ನ, ಆವಾಸದ ಪ್ರಶ್ನೆಗಳು ಅಡಗಿದ್ದವು. ಸಮಯಕ್ಕೆ ಹೋಗಬೇಕು, ಹೇಳಿದ ಕೆಲಸ ಮಾಡಬೇಕು, ಹಾಸಿಗೆ ಇದ್ದಷ್ಟು ಕಾಲುಚಾಚಬೇಕು. ಮನೆಬಾಡಿಗೆ, ವಾಹನಖರ್ಚು, ದಿನಸಿ, ಮನೆಗೆಲಸದವಳ